2. ವರದಿಗಳನ್ನೊಪ್ಪಿಸುವುದು :

ಶ್ರೀಮತಿ ಭಾಗೀರಥಿ ಮುರುಳಸಿದ್ದನಗೌಡ: **ಶ್ರೀ ಹೆಚ್.ಡಿ. ಬಸವರಾಜು (ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ)**: ಇವರ ಪರವಾಗಿ ಮಾನ್ಯ ಅಧ್ಯಕ್ಷರೆ, 2003–04ನೇ ಸಾಲಿನ ಮೂರೆನೇ ವರದಿ ಹಾಗೂ 2006–07ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ವಿಶೇಷ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. ಅರ್ಜಿಗಳನ್ನೊಪ್ಪಿಸುವುದು :

ಶ್ರೀ ಮೋಹನ್ ಕೆ. ಶೆಟ್ಟಿ (ಸದಸ್ಯರು): ಮಾನ್ಯ ಅಧ್ಯಕ್ಷರೇ, 1962ರಲ್ಲಿ ನೆರೆಹಾವಳಿಯಿಂದ ತೊಂದರೆಗೊಳಗಾದ ಕುಮಟ ತಾಲ್ಲೂಕು ನಾಡಮಸ್ತೇರಿ ಗ್ರಾಮದ ಬಡಜನಗಳಿಗೆ ಮನೆಗಳು ಮತ್ತು ದೋಣಿಗಳನ್ನು ನೀಡಿದ್ದಕ್ಕೆ ಸಂಬಂಧಪಟ್ಟ ದಾಖಲೆಗಳು ಇಲ್ಲದಿರುವುದರಿಂದ ಅವರುಗಳಿಗೆ ಹಕ್ಕುಪತ್ರಗಳನ್ನು ನೀಡದಿರುವ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಶ್ರೀ ಸಿದ್ದುಸವದಿ (ಸದಸ್ಯರು): ಮಾನ್ಯ ಅಧ್ಯಕ್ಷರೆ, ಜಮಖಂಡಿ ನಗರಕ್ಕೆ ಪರ್ಯಾಯ ರಸ್ತೆ ನಿರ್ಮಿಸಲು ಜಂಬಗಿ ಗ್ರಾಮದ ಹತ್ತಿರ ಕೃಷ್ಣ ನದಿಗೆ ನೂತನ ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸದನಕ್ಕೆ ಅರ್ಜಿಯನ್ನೊಪ್ಪಿಸುತ್ತೇನೆ.

ಶ್ರೀ ರಾಜಶೇಖರ ಜಿ. ಸಿಂಧೂರ: ಮಾನ್ಯ ಅಧ್ಯಕ್ಷರೆ, ಸವಣೂರು ತಾಲ್ಲೂಕಿನ ಕೃಷ್ಣಾಪುರ ಗ್ರಾಮದ ಬಡ ರೈತರಿಗೆ 1995ನೇ ಸಾಲಿನಲ್ಲಿ ಸಾಗುವಳಿಗಾಗಿ ನೀಡಿದ್ದ ಪಟ್ಟಾವನ್ನು ರದ್ದು ಮಾಡಿರುವುದರಿಂದ ಆಗಿರುವ ತೊಂದರೆಯನ್ನು ಸರಿಪಡಿಸುವ ಬಗ್ಗೆ ಸದನಕ್ಕೆ ಅರ್ಜಿಯನ್ನೊಪ್ಪಿಸುತ್ತೇನೆ.

ಶ್ರೀ ಡಿ. ನಾಗರಾಜಯ್ಯ (ಸದಸ್ಯರು): ಮಾನ್ಯ ಅಧ್ಯಕ್ಷರೆ – ಹುಲಿಯೂರುದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಪ್ರಧಾನ ಮಂತ್ರಿಗಳ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಸುಮಾರು 72 ಕಿ.ಮಿ.ಗಳಷ್ಟು ರಸ್ತೆಯ ಕಾಮಗಾರಿಗಳು ನಡೆಯುತ್ತಿದ್ದರೂ ಸಹ ಸರಿಯಾದ ಮಾಹಿತಿಯನ್ನು ನೀಡದೆ 2006–07ನೇ ಸಾಲಿನಲ್ಲಿಯೂ ಈ ಕಾಮಗಾರಿಗಳು ತಪ್ಪಾಗಿ ಪುನರಾವರ್ತನೆಯಾಗಿರುವುದನ್ನು ಸರಿಪಡಿಸುವ ಸಂಬಂಧ ಸದನಕ್ಕೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು: ಅರ್ಜಿಗಳನ್ನು ಒಪ್ಪಿಸಲಾಯಿತು.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗ ಶೂನ್ಯವೇಳೆಯನ್ನು ತೆಗೆದುಕೊಳ್ಳಬೇಕು. ಶೂನ್ಯವೇಳೆ ಆದ ಮೇಲೆ ಗಮನ ಸೆಳೆಯುವ